ಇರುವ ಲಭ್ಯತೆಯನ್ನು ನಾವು ಗಮನಿಸಿ ಕೊಡುತ್ತಿದ್ದೇವೆ. ಹೆಚ್ಚಿಗೆ ಸೀಮೆಎಣ್ಣೆಯನ್ನು ಪೂರೈಕೆ ಮಾಡಲಿಕ್ಕೆ ಪರಿಶೀಲಿಸುತ್ತೇವೆ.

2) ಗಮನ ಸೆಳೆಯುವ ಸೂಚನೆ:

ವಿಷಯ: ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ರೈತರಿಗೆ ಭೂಸ್ವಾಧೀನಕ್ಕಾಗಿ ಪರಿಹಾರಧನ ನೀಡದಿರುವ ಬಗ್ಗೆ ಹಾಗೂ ಕೈಗಾರಿಕೆಯ ಪ್ಲಾಟ್‌ಗಳನ್ನು ಅಭಿವೃದ್ಧಿಪಡಿಸಿ ಹಂಚಿಕೆ ಮಾಡಿಲ್ಲದಿರುವ ಬಗ್ಗೆ.

ಶ್ರೀ ಎನ್.ಸಂಪಂಗಿ (ಬಾಗೇಪಲ್ಲಿ) :– ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ರೈತರಿಗೆ ಭೂಸ್ವಾಧೀನಕ್ಕಾಗಿ ಪರಿಹಾರಧನ ನೀಡದಿರುವ ಬಗ್ಗೆ ಹಾಗೂ ಕೈಗಾರಿಕೆಯ ಪ್ಲಾಟ್‌ಗಳನ್ನು ಅಭಿವೃದ್ಧಿಪಡಿಸಿ ಹಂಚಿಕೆ ಮಾಡಿಲ್ಲದಿರುವ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಕರ್ನಾಟಕ ವಿಧಾನ ಸಭೆ

ಶ್ರೀ ಮುರುಗೇಶ್ ಆರ್.ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):– ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆ,ಬಾಗೇಪಲ್ಲಿ ತಾಲ್ಲೂಕು, ಬಾಗೇಪಲ್ಲಿ ಮತ್ತು ಕೊಂಡರೆಡ್ಡಿಪಲ್ಲಿ ಗ್ರಾಮಗಳಲ್ಲಿನ ಒಟ್ಟು 200 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶದ ಸ್ಥಾಪನೆಗಾಗಿ ಸ್ವಾಧೀನಪಡಿಸಿಕೊಳ್ಳಲು ದಿನಾಂಕ: 01.07.2006 ರಂದು ಜರುಗಿದ ಮಂಡಳಿಯ 274ನೇ ಸಭೆಯಲ್ಲಿ ನಿರ್ಣಯಿಸಲಾಗಿದೆ. ಅಂತೆಯೇ ಈ ಗ್ರಾಮಗಳಲ್ಲಿನ 200 ಎಕರೆ ಜಮೀನಿಗೆ ದಿನಾಂಕ: 16.11.2006 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, ಈ ಪೈಕಿ ಒಟ್ಟು 192 ಎಕರೆ 08.03.2007 ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

ಈ ಜಮೀನಿಗೆ ಎಕರೆ ಒಂದಕ್ಕೆ ರೂ.15.00 ಲಕ್ಷದಂತೆ ಪರಿಹಾರಧನ ಪಾವತಿಸಲು ದಿನಾಂಕ: 10.08.2008 ರಂದು ಜರುಗಿದ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿದೆ. ಅದರಂತೆ ಪರಿಹಾರ ಧನ ಪಾವತಿಸುವ ಸಲುವಾಗಿ

ರೂ.16.72 ಕೋಟಿಗಳ ಅನುದಾನವನ್ನು ದಿನಾಂಕ: 29.09.2010 ರಂದು ವಿಶೇಷ ಭೂಸ್ವಾಧೀನಾಧಿಕಾರಿಯವರಿಗೆ ಬಿಡುಗಡೆ ಮಾಡಲಾಗಿದೆ.

ಪ್ರಸ್ತಾವಿತ ಭೂಸ್ವಾಧೀನ ಕ್ರಮವನ್ನು ಪ್ರಶ್ನಿಸಿ ಶ್ರೀ.ಅಬ್ದುಲ್ ಬಷೀರ್‌ಸಾಬ್ ಮತ್ತು ಇತರೆ 11 ಜನರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದ ರಿಟ್ ಅರ್ಜಿ ಸಂಖ್ಯೆ: 6758/2008 ರ ಪ್ರಕರಣದಲ್ಲಿ ಅಚಿತಿಮ ಅಧಿಸೂಚನೆಗೆ ತಡೆಯಾಜ್ಞೆ ನೀಡಿ ಮಾನ್ಯ ನ್ಯಾಯಾಲಯವು ದಿನಾಂಕ: 17.06.2010 ರಂದು ಮಧ್ಯಂತರ ಆದೇಶ ಹೊರಡಿಸಿದ್ದ ಕಾರಣ ಸದರಿ ಜಮೀನಿಗೆ ಪರಿಹಾರ ಪಾವತಿಸಲು ಸಾಧ್ಯವಾಗಿರಲಿಲ್ಲ. ಈ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ: 17.09.2012 ರಂದು ಅಂತಿಮ ತೀರ್ಪನ್ನು ನೀಡಿದ್ದು, ಪ್ರಸ್ತಾವಿತ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿಂತೆ ರಿಟ್ ಅರ್ಜಿದಾರರು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ಸೂಕ್ತ ಆದೇಶ ಹೊರಡಿಸುವಂತೆ ನಿರ್ದೇಶನ ನೀಡಿದೆ.

ಬಾಗೇಪಲ್ಲಿ ಕೈಗಾರಿಕಾ ಪ್ರದೇಶದಲ್ಲಿ ಬೇಡಿಕೆ ಆಧಾರದ ಮೇಲೆ ಪ್ರಸಕ್ತ ಭೂಸ್ವಾಧೀನ ಪ್ರಕ್ರಿಯೆ ಮುಂದುವರೆಸಬಹುದೇ ಎಂಬ ಬಗ್ಗೆ ಸಮಗ್ರವಾಗಿ ಪರಿಶೀಲಿಸಲು ಹಾಗೂ ಈಗಿರುವ ಜಮೀನುಗಳೊಂದಿಗೆ ಬಾಕಿ ಉಳಿದ 200 ಎಕರೆ ಸರ್ಕಾರಿ ಜಮೀನನ್ನೂ ಸಹ ಭೂಸ್ವಾಧೀನಕ್ಕೆ ಒಳಪಡಿಸುವ ಸಲುವಾಗಿ ಸದರಿ ಜಮೀನುಗಳನ್ನು ಕೆ.ಐ.ಎ.ಡಿ.ಬಿ.ಗೆ ನೀಡುವ ಕುರಿತು ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವಂತೆ ದಿನಾಂಕ: 20.11.2012 ರ ಪತ್ರದಲ್ಲಿ ಮಂಡಳಿಗೆ ನಿರ್ದೇಶನ ನೀಡಲಾಗಿರುತ್ತದೆ.

ಬಾಗೇಪಲ್ಲಿ ಮತ್ತು ಕೊಂಡರೆಡ್ಡಿಪಲ್ಲಿ ಗ್ರಾಮಗಳಲ್ಲಿನ ಒಟ್ಟು 192-00 ಎಕರೆ ಜಮೀನಿಗೆ ಭೂಪರಿಹಾರ ಪಾವತಿ ಕಾರ್ಯವನ್ನು ಮುಂದುವರಿಸಲು ಹಾಗೂ ಈ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೆಮೋ ದಾಖಲಿಸಲು ದಿನಾಂಕ: 27.12.2012 ರಂದು ಜರುಗಿದ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ. ಅಂತೆಯೇ ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರಸ್ತಾವಿತ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಸದರಿ ಪ್ರದೇಶವನ್ನು ಕೈಗಾರಿಕಾ ಪ್ರದೇಶವನ್ನಾಗಿ ಅಭಿವೃದ್ಧಿ ಪಡಿಸಿ ಈ ಪ್ರದೇಶದಲ್ಲಿ

ಯೋಜನೆ ಅನುಷ್ಠಾನಗೊಳಿಸಲು ಮುಂದೆ ಬರುವ ಕಂಪನಿಗಳಿಗೆ ಜಮೀನು ಹಂಚಿಕೆ ಮಾಡಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎನ್.ಸಂಪಂಗಿ :– ಉತ್ತರ ಕೊಟ್ಟಿದ್ದಾರೆ. ಅನೇಕ ಸಾರಿ ಈ ಸದನಕ್ಕೆ ತಪ್ಪು ಮಾಹಿತಿಯನ್ನು ಅಧಿಕಾರಿಗಳಿಂದ ಕೊಡಿಸಿದ್ದಾರೆ. ಅದನ್ನು ತಿದ್ದುಪಡಿ ಮಾಡಿದ್ದಾಗಿದೆ. ಈಗಾಗಲೇ 192 ಎಕರೆ ಪ್ರದೇಶವನ್ನು ನಮ್ಮ ಬಾಗೇಪಲ್ಲಿ ನ್ಯಾಷನಲ್ ಹೈವೇ ಪಕ್ಕದಲ್ಲಿರುವಂಥ ಜಾಗದಲ್ಲಿ ಆಗಬೇಕೆಂದು ತೀರ್ಮಾನವಾಗಿದೆ. ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ ಯಾವತ್ತು ಇದನ್ನು ಪ್ರಾರಂಭಿಸುತ್ತಾರೆ ಎಂಬ ಬಗ್ಗೆ ನಿಗದಿಯಾದಂಥ ದಿನಾಂಕವನ್ನು ಕೊಡಬೇಕು.

ಶ್ರೀ ಮುರುಗೇಶ್ ಆರ್.ನಿರಾಣಿ :– 11 ಜನ ರೈತರು ಕೋರ್ಟಿಗೆ ಹೋದ ಕಾರಣ ಸರ್ವೆ ನಂಬರ್ ಆಗದೇstayಆಗಿತ್ತು. ಈಗಾಗಲೇ ಆstay vacateಆಗಿದೆ. ನಾವು KIADB ಯಿಂದ ಏನು ಪರಿಹಾರಧನವನ್ನು ಕೊಡಿಸಬೇಕಾಗಿತ್ತು. ಅದನ್ನು SLO ಮೂಲಕ deposit ಮಾಡಿದ್ದೇವೆ. Majorಆಗಿ ಪರಿಹಾರಧನ ಕೊಟ್ಟಿದ್ದೇವೆ. ಈಗ ಸ್ವಲ್ಪ ರೈತರ ಹಣ ಉಳಿದಿದೆ ಅದನ್ನು ತಕ್ಷಣ startಮಾಡುತ್ತೇವೆ.

ಅಧ್ಯಕ್ಷರು :– Clarification ಕೇಳಿದ್ದೀರಿ.

ಶ್ರೀ ಎನ್.ಸಂಪಂಗಿ :– 2006 ರಲ್ಲಿ ಎಂದು ಹೇಳಿ ಇವತ್ತಿನವರೆಗೆ ಒಂದು ದಿನಾಂಕ ನಿಗದಿಪಡಿಸಿಲ್ಲ. ಅದಕ್ಕೆ ಅವರು ಯಾವತ್ತು ಪ್ರಾರಂಭಿಸುತ್ತಾರೆಂಬ ಬಗ್ಗೆ ದಿನಾಂಕವನ್ನು ನಿಗದಿ ಮಾಡಲಿ.

ಶ್ರೀ ಮುರುಗೇಶ್ ಆರ್.ನಿರಾಣಿ :– Immediate ಆಗಿ ಮಾಡುತ್ತೇವೆ.

ಅಧ್ಯಕ್ಷರು :– ಯು.ಟಿ.ಖಾದರ್‌ರವರು ಗಮನ ಸೆಳೆಯುವುದು.

3) ವಿಷಯ : 2010 ನೇ ಸಾಲಿನಲ್ಲಿ ನಡೆದ ಉಳ್ಳಾಲ್ ಸಯ್ಯದ್ ಮದನಿ ದರ್ಗಾ ಉರುಸ್ ಸಮಾರಂಭಕ್ಕೆ ರಾಜ್ಯ ಸರ್ಕಾರವು ಒಂದು ಕೋಟಿ ರೂ.ಗಳನ್ನು ವ್ಯಯ ಮಾಡಿದ್ದು, ಈ ಪೈಕಿ 50 ಲಕ್ಷ ರೂಪಾಯಿಗಳನ್ನು ಈವರೆವಿಗೂ ಬಿಡುಗಡೆ ಮಾಡದೇ ಇರುವ ಬಗ್ಗೆ.

ಶ್ರೀ ಯು.ಟಿ.ಖಾದರ್ (ಮಂಗಳೂರು) :– 2010 ನೇ ಸಾಲಿನಲ್ಲಿ ನಡೆದ ಉಳ್ಳಾಲ್ ಸಯ್ಯದ್ ಮದನಿ ದರ್ಗಾ ಉರುಸ್ ಸಮಾರಂಭಕ್ಕೆ ರಾಜ್ಯ